# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ 25.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ-ಪ್ರತಿವಾದಿ ಪರ ವಕೀಲರಾದ ಶ್ರೀ.ಹೆಚ್ ಜಿ ಎಸ್ ರವರಿಂದ

ಈ ದಾವೆಯನ್ನು ನೀವು ಯಾರ ವಿರುದ್ಧ ಯಾವ ಕಾರಣಕ್ಕೆ ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ಚಿಕ್ಕಣ್ಣರವರು ವಿನಃಕಾರಣ ಬಂದು ತೊಂದರೆ ನೀಡಿದ್ದರಿಂದ ಅವರ ವಿರುದ್ಧ ದಾಖಲು ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಯಾವ ಊರಿನಲ್ಲಿ ಇರುತ್ತದೆ ಎಂದರೆ ಗಣೇಶಪುರ ಗ್ರಾಮದಲ್ಲಿ ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಯಾವ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ ಎಂದರೆ ಶಿವಪುರ ಗ್ರಾಮ ಪಂಚಾಯಿತಿ ಎಂದು ನುಡಿಯುತ್ತಾರೆ. ನಿಮ್ಮದು ಯಾವ ಊರು ಎಂದರೆ ಹಾಗಲವಾಡಿ ಎಂದು ನುಡಿಯುತ್ತಾರೆ. ನಿಮ್ಮ ಗ್ರಾಮ ಪಂಚಾಯಿತಿಯು ಕೂಡ ಹಾಗಲವಾಡಿ ಎಂದರೆ ಸರಿ. ನೀವು ಗಣೇಶಪುರದ ನಿವಾಸಿಯಾಗಿರುವುದಿಲ್ಲ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ನಿಮಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಶಿವಪುರ ಗ್ರಾಮ ಪಂಚಾಯಿತಿ ರವರು ನನಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಯಾವ ಯೋಜನೆಯ ಅಡಿ ಈ ನಿವೇಶನವನ್ನು ನಿಮಗೆ ಮಂಜೂರು ಮಾಡಿದ್ದಾರೆ ಎಂದರೆ ನಾನು ದಾವಾ ಸ್ವತ್ತಿನಲ್ಲಿ ಗುಡಿಸಲು ಹಾಕಿಕೊಂಡು ವಾಸವಾಗಿದ್ದು ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದೆನು, ಶಿವಪುರ ಗ್ರಾಮದ ಸ.ನಂ.75/5 ರಲ್ಲಿ 2 ಎಕರೆ 20 ಗುಂಟೆ ನನ್ನ ತಂದೆಗೆ ಜಮೀನು ಮಂಜೂರಾಗಿತ್ತು, ಪಂಚಾಯಿತಿರವರು ಸ್ಥಳಕ್ಕೆ ಬಂದು ಸ್ಥಳ

ಪರಿಶೀಲನೆ ಮಾಡಿ ಖಾತೆ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಇನ್ನೂ ಮಂಜೂರಾಗಿಲ್ಲ ಎಂದು ನುಡಿಯುತ್ತಾರೆ. ಸ.ನಂ.75/5 ರ ಜಮೀನು ಯಾವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಶಿವಪುರ ಗ್ರಾಮ ಪಂಚಾಯಿತಿ ವ್ಯಾಪ್ತಿ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟ ಯಾವುದಾದರೂ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಇನ್ನೂ ಹಾಜರುಪಡಿಸಿಲ್ಲ, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ರವರು ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿದ್ದರೂ ಎಂದು ಹೇಳಲಾದ ನಡವಳಿಕೆಯನ್ನು ನ್ಯಾಯಾಲಯಕ್ಕೆ ನೀಡಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ದಾವಾ ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ ಉದ್ದೇಶಪೂರ್ವಕವಾಗಿ ಪ್ರತಿವಾದಿಯರ ವಿರುದ್ಧ ಈ ಸುಳ್ಳು ದಾವಾ ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಆಧಾರ್ ಕಾರ್ಡ್ , ರೇಷನ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಗಳು ಹಾಗಲವಾಡಿಯ ವಿಳಾಸದಲ್ಲಿಯೇ ಇರುತ್ತದೆ ಎಂದರೆ ಸರಿ. ನಿಮಗೆ ಹಾಗಲವಾಡಿಯಲ್ಲಿ ಸ್ವಂತ ಮನೆಯಿದ್ದು ಅಲ್ಲಿಯೇ ವಾಸವಾಗಿದ್ದಿರಿ ಎಂದರೆ ಸಾಕ್ಷಿಯು ಗಣೇಶಪುರದಲ್ಲಿ ವಾಸವಾಗಿದ್ದೇನೆ, ಹಾಗಲವಾಡಿಯಲ್ಲಿ ನನಗೆ ಯಾವುದೇ ಸ್ವಂತ ಮನೆ ಇಲ್ಲ ಎಂದು ನುಡಿಯುತ್ತಾರೆ. ನೀವು ಗಣೇಶಪುರದಲ್ಲಿ ವಾಸವಾಗಿದ್ದಿರಿ ಎಂದು ತೋರಿಸುವ ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದರೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಯಾವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಿ ಎಂದರೆ ನಾನು ಗುಡಿಸಿಲಿನಲ್ಲಿ ವಾಸವಾಗಿರುವ ಫೋಟೋಗಳು ಮತ್ತು ಪಂಚಾಯಿತಿಗೆ ಕಟ್ಟಿರುವ ರಶೀದಿಗಳು, ಖಾತಾ extract ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಶ್ರೀಧರ್ ಅದ ನೀವು ಗಣೇಶಪುರದಲ್ಲಿ ವಾಸವಾಗಿಲ್ಲ ಎಂದು ಪಂಚಾಯಿತಿ ರವರು ಒಂದು ದೃಢೀಕರಣವನ್ನು ನೀಡಿದ್ದಾರೆ ಎಂದರೆ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ದೃಢೀಕರಣ ಪತ್ರದಲ್ಲಿ ನಿಮಗೆ ಯಾವುದೇ ನಿವೇಶನವನ್ನು ಪಂಚಾಯಿತಿ ವತಿಯಿಂದ

ಮಂಜೂರು ಮಾಡಿಲ್ಲ ಎಂದು ತಿಳಿಸಿದ್ದಾರೆ ಎಂದರೆ ಸಾಕ್ಷಿಯು ಖಾತಾ extract ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

2. ದಾವಾ ಅನುಸೂಚಿ ಸ್ವತ್ತಿನ ಚಕ್ಕುಬಂದಿ ಏನು ಎಂದರೆ ಸಾಕ್ಷಿಯು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಉಳಿಕೆ ಖಾಲಿ ನಿವೇಶನ, ಉತ್ತರಕ್ಕೆ ರೇಣುಕಮ್ಮರವರ ಮನೆ, ದಕ್ಷಿಣಕ್ಕೆ ರಸ್ತೆ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿರುವ ನಿವೇಶನಕ್ಕೆ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಚಕ್ಕುಬಂದಿ ಕೂಡ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ಕೇವಲ ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ಮಾತ್ರ ನಿಮ್ಮ ಹೆಸರು ನಮೂದಾಗಿದೆ ಎಂದರೆ ಸರಿಯಲ್ಲ. ಯಾವುದೇ ನಿವೇಶನವನ್ನು ಗ್ರಾಮ ಪಂಚಾಯಿತಿಯಿಂದ ಮಂಜೂರು ಮಾಡುವ ಪೂರ್ವದಲ್ಲಿ ಗ್ರಾಮ ಸಭೆಯಲ್ಲಿ ನಿರ್ಧಾರ ಮಾಡಿ ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ ಎಂದರೆ ಸರಿ. ಆ ರೀತಿ ಯಾವ ದಿನಾಂಕದಂದು ಗ್ರಾಮ ಸಭೆ ನಡೆದು ನಿಮ್ಮ ಹೆಸರಿಗೆ ನಡವಳಿಕೆ ಮಾಡಿದ್ದಾರೆ ಎಂದರೆ ಜನವರಿ 2019 ರಲ್ಲಿ ಆದರೆ ನಿರ್ಧಿಷ್ಟವಾದ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಗ್ರಾಮ ಸಭೆ ನಡೆದಿದೆ ಎಂದು ತೋರಿಸುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಗ್ರಾಮ ಸಭೆಯಿಂದ ಯಾವುದೇ ಹಕ್ಕು ಪತ್ರ ನೀಡದೇ ಇದ್ದರೂ ಕೂಡ ಮೋಸ ಮಾಡುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಈ ದಾವ ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ.

(**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು**)

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.